Reg. No. | | | | | | | | | |

# BBAKAL 231/BBAKAL 232

## Choice Based Credit System III Semester B.B.A. Examination, April/May 2022 (2020 – 21 and Earlier Batches/2021 – 22 Batch Onwards) KANNADA Kannada Language (Group – III)

ಸಮಯ : 3 ಗಂಟೆಗಳು

ಗರಿಷ್ಠ ಅಂಕಗಳು : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ವ್ಯಕ್ತಿಗತ ಅರಿವು, ಆತ್ಮ ವಿಮರ್ಶೆಗಳು ಒಬ್ಬ ವ್ಯಕ್ತಿ ಮಾತ್ರವಲ್ಲ, ಒಂದು ಸಮಾಜದ ಸುಧಾರಣೆಯಲ್ಲಿಯೂ ಹೇಗೆ ಪಾತ್ರವಹಿಸಬಲ್ಲವು ಎಂಬುದನ್ನು ವಿಚಾರಮಾಡಿ.

**ಅಥವಾ**

ತಪ್ಪು ಮಾಡದೆಯೂ ಕಷ್ಟವನ್ನು , ಹಿಂಸೆಯನ್ನು ಅನುಭವಿಸುವ ಚಂದ್ರಮತಿಯ ವ್ಯಕ್ತಿತ್ವದ ಔನ್ನತ್ಯವನ್ನು ಪರಿಶೀಲಿಸಿ.

2) ವೈಯಕ್ತಿಕ ಬದುಕು ಹಾಗೂ ಕಲಾತ್ಮಕ ಬದುಕುಗಳ ನಡುವಿನ ಸಂಬಂಧ ಹಾಗೂ ವೈರುಧ್ಯಗಳು 'ಮಾಟ' ಕತೆಯಲ್ಲಿ ವ್ಯಕ್ತವಾಗಿರುವ ರೀತಿಯನ್ನು ಪರಿಶೀಲಿಸಿ.

**ಅಥವಾ**

ತುಳುನಾಡಿನ ಆರಾಧನಾ ಪರಂಪರೆಯ ಶ್ರೀಮಂತಿಕೆಯನ್ನು ಪರಿಚಯಿಸಿ.

3) ನಾಲೆಯ ನಿರ್ಮಾಣ ಕಾರ್ಯದುದ್ದಕ್ಕೂ ಕಾರ್ಮಿಕರು ಎದುರಿಸಿದ ಸಮಸ್ಯೆಗಳನ್ನು 'ತಿರುಗೋಡಿನ ರೈತ ಮಕ್ಕಳು' ಕಾದಂಬರಿಯ ಹಿನ್ನೆಲೆಯಲ್ಲಿ ವಿಮರ್ಶಿಸಿರಿ.

**ಅಥವಾ**

ನಾ. ಡಿಸೋಜರವರು ತಮ್ಮ ಕಾದಂಬರಿಯಲ್ಲಿ ಜಮೀನ್ದಾರರ ದಬ್ಬಾಳಿಕೆ-ಶೋಷಣೆಯನ್ನು ಚಿತ್ರಿಸಿರುವ ಬಗೆಯನ್ನು ಚರ್ಚಿಸಿ.

II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ಪೂರ್ವಜರಿಂದ ಬಳುವಳಿಯಾಗಿ ಬಂದಿರುವ ಔದಾರ್ಯ, ಔನ್ನತ್ಯ , ಭಕ್ತಿಗಳು ಯುವಪೀಳಿಗೆಯಲ್ಲಿ ನಶಿಸುತ್ತಿರುವ ಬಗೆಗಿನ ಕಳವಳವನ್ನು ಅವಲೋಕಿಸಿ.

**ಅಥವಾ**

ಸಮಾಜ ಹಾಗೂ ದೇಶದ ಅಭಿವೃದ್ಧಿಯಲ್ಲಿ ಮೂಲಭೂತ ಸೌಕರ್ಯಗಳ ಅವಶ್ಯಕತೆಯನ್ನು 'ಇದು ಮೊದಲು' ಕವನ ಸಮರ್ಥಿಸುವ ವಿಧಾನವನ್ನು ಪರಾಮರ್ಶಿಸಿ.

ಪು.ತಿ.ನೋ.

2) ಮನುಷ್ಯನ ಅರ್ಥಪೂರ್ಣ ಬದುಕಿಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳಲ್ಲಿ ನೀರೂ ಕೂಡ ಒಂದು–ಈ ವಿಚಾರವನ್ನು ಕೆ.ಟಿ. ಗಟ್ಟಿಯವರು ತಮ್ಮ ಲೇಖನದಲ್ಲಿ ವಿವರಿಸಿದ ಬಗೆಯನ್ನು ವಿಶ್ಲೇಷಿಸಿ.

**ಅಥವಾ**

ತ್ಯಾಂಪನ ಬದುಕಿನ ವೈರುಧ್ಯಗಳು ಆತನ ಬದುಕಿನ ದುರಂತಕ್ಕೆ ಕಾರಣವಾದ ಬಗೆಯನ್ನು ವಿವೇಚಿಸಿ.

3) ಮೇಸ್ತ್ರಿ ದುರ್ಗೋಜಿಯ ನಯವಂಚಕತನವನ್ನು 'ತಿರುಗೋಡಿನ ರೈತ ಮಕ್ಕಳು' ಕಾದಂಬರಿ ಹೇಗೆ ಚಿತ್ರಿಸುತ್ತದೆ ? ವಿವರಿಸಿರಿ.

**ಅಥವಾ**

ಜಮೀನ್ದಾರರ ದಬ್ಬಾಳಿಕೆ–ಶೋಷಣೆಯನ್ನು ನಾ. ಡಿಸೋಜ ತಮ್ಮ ಕಾದಂಬರಿಯಲ್ಲಿ ಚಿತ್ರಿಸಿದ ಬಗೆಯನ್ನು ವಿವರಿಸಿ.

III. ಕೆಳಗಿನವುಗಳಲ್ಲಿ **ಒಂದರ** ಸಂದರ್ಭ ಸೂಚಿಸಿ ಭಾವಾರ್ಥವನ್ನು ವಿವರಿಸಿರಿ. **(1×5=5)**

ಕುಟಿಲವ ಬಿಡದಿಹ ಕುಜನರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಮನದಲಿ
ವಿಠಲನ ನೆನೆದರೆ ಏನು ಫಲ

**ಅಥವಾ**

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ !
ತನುವಿನಲಿ ಹುಸಿ ತುಂಬಿ, ಮನದಲ್ಲಿ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ !
ಕೂಡಲಸಂಗಮದೇವ.

IV. ಯಾವುದಾದರೂ **ಎರಡು** ಸಾಲುಗಳನ್ನು ಸಂದರ್ಭ ಸ್ವಾರಸ್ಯದೊಂದಿಗೆ ವಿವರಿಸಿರಿ. **(2×4=8)**

1) ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯ
2) ರಾಹುಗ್ರಸ್ತವಾದ ತರುಣೇಂದುಬಿಂಬಂ ನೆಲಕೆ ಬೀಳ್ವಂದದೆ
3) ತಾಯಿಯಿದ್ದರೆ ಸಂಪತ್ತು ಹೆಣ್ಣಿಗೆ
4) ನಾಡಿನುದ್ದಗಲಕ್ಕೂ ಬರಿ ಸುಳ್ಳುಗಳದೆ ಬಯಲಾಟ.

V. ಅ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ಡಾ. ಅಮೃತ ಸೋಮೇಶ್ವರ
2) ಬಿ. ಡಿ. ಗಣಪತಿ
3) ಮಾಲತಿ ಪಟ್ಟಣಶೆಟ್ಟಿ
4) ಬಿ. ಎಂ. ಶ್ರೀ.

ಆ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. (2×4=8)

1) ಇರ್ಫುರ್

2) ಕಾರ್ಪನಿಕಸ್

3) ಪಂಬದ

4) ಬಹಾಯಿ ಧರ್ಮ.

VI. **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (12×1=12)

1) ಹರಿಹರನ ಸೋದರಳಿಯ ಹಾಗೂ ಶಿಷ್ಯ ಯಾರು ?

2) ರಾಘವಾಂಕನ ಹೆತ್ತವರ ಹೆಸರೇನು ?

3) ಪುರಂದರದಾಸರ ಹುಟ್ಟೂರು ಯಾವುದು ?

4) 'ಜನವಾಣಿ ಬೇರು ಕವಿವಾಣಿ ಹೂವು' ಇದು ಯಾರು ಹೇಳಿದ ಉಕ್ತಿ ?

5) 'ಹೊಂಗನಸು' ಇದು ಯಾರ ಸ್ವತಂತ್ರ ಕವನ ಸಂಕಲನ ?

6) 'ಅನಾಥೆ' ಇದು ಯಾರ ಕಾದಂಬರಿ ?

7) 'ಕಾಲೇವಾಲ' ಇದು ಯಾವ ದೇಶದ ಜನಪದ ಕಾವ್ಯ ?

8) 'ಭೂಮಿ ಗುಂಡಗಿದೆ' ಎಂದು ಹೇಳಿದವರು ಯಾರು ?

9) 'ತೀರದ ತೆರೆ' ಇದು ಯಾರ ಪ್ರಕಟಿತ ಕಾದಂಬರಿ ?

10) 'ಕಾಡಿನ ಬೆಂಕಿ' ಚಲನಚಿತ್ರ ಯಾವ ಪ್ರಶಸ್ತಿಯನ್ನು ಪಡೆದಿದೆ ?

11) ತ್ಯಾಂಪನ ಸೋದರಮಾವನ ಹೆಸರೇನು ?

12) ಪ್ಲಾಸ್ಮಾ ಎಂದರೇನು ?